# ಸರಕಾರಿ ಪ್ರೌಢ ಶಾಲೆ ಗುಂಡ ತಾ : ಸಿಂಧನೂರು ಜಿ : ರಾಯಚೂರು

## ಸಮಾಜ ವಿಜ್ಞಾನ ಮಾದರಿ ಪ್ರಶ್ನೆ ಪತ್ರಿಕೆ - 1 2014 - 15

ತರಗತಿ : 10 ನೇ ತರಗತಿ ಅಂಕಗಳು : 80

ಸಮಯ : 3 ಗಂಟೆ ದಿನಾಂಕ :

**ಪ್ರಶ್ನೆ 1] ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.** **10 x 1 = 10**

1. ಭಾರತದ ಮೊದಲನೇ ಗವರ್ನರ್ ಜನರಲ್ ___________

ಅ) ಸರ್ ವಿಲಿಯಂ ಬೆಂಟಿಂಕ್ ಬ) ಲಾರ್ಡ್ ಕಾರನ್ ವಾಲಿಸ್ ಕ) ರಾಬರ್ಟ್ ಕ್ಲೈವ್ ಡ) ವಾರನ್ ಹೇಸ್ಟಿಂಗ್ಸ್

2. ರಾಜ್ಯ ಪುನರ್ ವಿಂಗಡನಾ ಕಾನೂನು ಜಾರಿಗೆ ಬಂದದ್ದು

ಅ) 1956 ಬ) 1953 ಕ) 1950 ಡ) 1947

3. ಭಾರತ & ಪಾಕಿಸ್ತಾನ ಸಮಸ್ಯೆ ಇನ್ನೂ ಜೀವಂತವಾಗಿರುವುದು ಈ ಕೆಳಗಿನ ಅಂಶದಿಂದ.

ಅ) ಭಯೋತ್ಪಾದನೆ ಬ) ಕಾಶ್ಮೀರ ಸಮಸ್ಯೆ ಕ) ಜಲವಿವಾದ ಡ) ಯಾವೂದು ಅಲ್ಲ

4. ವಿಶ್ವ ಸಂಸ್ಥೆಯ ಭದ್ರತಾ ಸಮಿತಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ಸರಿ ಹೊಂದದು.

ಅ) ವಿಶ್ವದ ಶಾಂತಿ ಭದ್ರತೆ ಕಾಪಾಡುತ್ತದೆ. ಬ) ಮಹಾಕಾರ್ಯದರ್ಶಿಯ ಉಮೇದುವಾರಿಕೆ ಸೂಚಿಸುತ್ತದೆ.

ಕ) ವಿಟೋ ಅಧಿಕಾರ ಹೊಂದಿದೆ. ಡ) ವಾರ್ಷಿಕ ಆಯವ್ಯಯ ಪಟ್ಟಿಗೆ ಅನುಮೋದನೆ ನೀಡುತ್ತದೆ.

5. ಕೆಳಗಿನ ಈ ಅಂಶದಿಂದಾಗಿ ಗರ್ಭದಲ್ಲಿರುವ ಮಗುವಿನ ಲಿಂಗ ಪರೀಕ್ಷಾ ವಿಧಾನವನ್ನು ಸರ್ಕಾರ ರದ್ದುಗೊಳಿಸಿದೆ.

ಅ) ಲಿಂಗ ಸಮಾನತೆ ಕಾಯುವುದು. ಬ) ಹೆಣ್ಣು ಭ್ರೂಣ ಹತ್ಯೆ ತಪ್ಪಿಸುವುದು

ಕ) ಸ್ತ್ರೀ ಗೌರವಕ್ಕೆ ಧಕ್ಕೆ ಬರುತ್ತದೆ. ಡ) ಧಾರ್ಮಿಕ ಮುಖಂಡರ ವಿರೋಧದಿಂದ

6. ಭಾರತದ ಮೊದಲನೆಯ ವಿವಿದೋದ್ದೇಶ ನದಿ ಕಣಿವೆ ಯೋಜನೆ _________

ಅ) ದಾಮೋದರ ನದಿ ಕಣಿವೆ ಯೋಜನೆ ಬ) ಬಾಕ್ರಾನಂಗಲ್ ಯೋಜನೆ

ಕ) ಹಿರಾಕುಡ್ ಯೋಜನೆ ಡ) ಕೃಷ್ಣ ಮೇಲ್ದಂಡೆ ಯೋಜನೆ

7. ವಾಣಿಜ್ಯ ಮಾದರಿಯ ಪುಷ್ಪ ಕೃಷಿಯನ್ನು ___________ ಎಂದು ಕರೆಯುವರು.

ಅ) ಜಾರೊ ಕಲ್ಚರ್ ಬ) ಸಿರಿಕಲ್ಚರ್ ಕ) ಫ್ಲೋರಿ ಕಲ್ಚರ್ ಡ) ಅಗ್ರಿಕಲ್ಚರ್

8. ಒಂದು ರಾಷ್ಟ್ರದಲ್ಲಿ ಒಂದು ವರ್ಷದ ಅವಧಿಯಲ್ಲಿ ಉತ್ಪಾದನೆಯಾಗುವ ಎಲ್ಲಾ ಸರಕು ಸೇವೆಗಳ ಒಟ್ಟು ಮೌಲ್ಯ.

ಅ) ರಾಷ್ಟ್ರೀಯ ಆದಾಯ ಬ) ತಲಾ ಆದಾಯ ಕ) ಸಮೂಹದ ಆದಾಯ ಡ) ಕುಟುಂಬದ ಆದಾಯ

9. ಬ್ಯಾಂಕಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಗಮನಿಸಬಹುದಾದ ಅಂಶ.

ಅ) ಹಣವನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವರ್ಗಾಹಿಸಲು ಬರುವುದಿಲ್ಲ ಬ)ಅಪಘಾತ ವಿಮೆಯ ಸೌಲಭ್ಯವಿದೆ.

ಕ) ಗ್ರಾಹಕರ ಮೇಲೆ ಅಧಿಕ ಬಡ್ಡಿಯನ್ನು ಹೇರುತ್ತದೆ. ಡ) ಸಾರ್ವಜನಿಕರ ಹಣದ ವಹಿವಾಟನ್ನು ಮಾಡುತ್ತವೆ.

10. ಅಪೋಲೋ ವೈದ್ಯಶಾಲೆಗಳ ಗುಂಪನ್ನು ಹುಟ್ಟು ಹಾಕಿದವರು.

ಅ) ವರ್ಗೀಸ್ ಕುರಿಯನ್ ಬ) ಡಾ. ಪ್ರತಾಪರಡ್ಡಿ ಕ) ನಾರಾಯಣ ಮೂರ್ತಿ ಡ) ನರೇಶ್ ಗೋಯಲ್

ಸರಕಾರಿ ಪ್ರೌಢ ಶಾಲೆ ಗುಂಡ ತಾ : ಸಿಂಧನೂರು ಜಿ : ರಾಯಚೂರು

**ಪ್ರಶ್ನೆ 2] ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **14 x 1 = 14**

11. ಜನಪದ ಆಕರಗಳು ಇಂದು ಚರಿತ್ರೆಕಾರರಿಗೆ ವರಪ್ರಸಾದವಾಗಿವೆ ಎಂದು ಹೇಗೆ ಹೇಳುವಿರಿ.
12. ಭಾರತವು ಸಂಸದೀಯ ಪ್ರಜಾಪ್ರಭುತ್ವ ಸರಕಾರ ಪದ್ಧತಿಯನ್ನು ಜಾರಿಗೆ ತಂದಿತು ಈ ಹೇಳಿಕೆಯನ್ನು ಸಮರ್ಥಿಸಿ.
13. ನಾಝಿ ಸಿದ್ಧಾಂತವು ಜರ್ಮನಿಯನ್ನು ಹಾಳು ಮಾಡಿತು ವಿಶ್ಲೇಷಿಸಿ.
14. ಜನಸಂಖ್ಯಾ ನಿಯಂತ್ರಣಕ್ಕೆ ನಿಮ್ಮ ಸಲಹೆ ಏನು?
15. ಭದ್ರತಾ ಸಮಿತಿಯನ್ನು ವಿಶ್ವಸಂಸ್ಥೆಯ ಸಚಿವ ಸಂಪುಟ ಎನ್ನುತ್ತಾರೆ ಈ ಹೇಳಿಕೆಯನ್ನು ವಿಮರ್ಶಿಸಿರಿ.
16. ವರದಕ್ಷಿಣೆ ನಿಯಂತ್ರಣ ಸರಕಾರದಿಂದಿ ಮಾತ್ರ ಸಾಧ್ಯವೆ? ಚರ್ಚಿಸಿ.
17. ನೈರುತ್ಯ ಮಾನ್ಸೂನ್ ಮಾರುತಗಳು ಅಕ್ಟೋಬರ್ ತಿಂಗಳಿನ ಆರಂಭದೊಡನೆ ಹಿಂದಿರುಗಲು ಪ್ರಾರಂಭಿಸುತ್ತವೆ ಕಾರಣ ಕೊಡಿ.
18. ಮಿಶ್ರ ಬೇಸಾಯ ಎಂದರೇನು?
19. ಬಾಕ್ಸೈಟ್ ಒಂದು ಅದ್ಭುತವಾದ ಲೋಹ. ಈ ಹೇಳಿಕೆಯನ್ನು ಸ್ಪಷ್ಟಪಡಿಸಿರಿ.
20. ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾರ ಬೀರುವ ಯಾವುದಾದರೂ ಎರಡು ಅಂಶಗಳನ್ನು ತಿಳಿಸಿ.
21. ರಾಷ್ಟ್ರೀಯ ಆದಾಯದ ಮೂಲಕ ಅಭಿವೃದ್ಧಿಯನ್ನು ಅಳೆಯುವದು ಸಮಂಜಸವಲ್ಲ ಹೇಗೆ?
22. ಕೊರತೆಯ ಆಯವ್ಯಯದ ಅರ್ಥ ಬರೆಯಿರಿ.
23. ಬಿಳಿಕ್ರಾಂತಿಯ ಪಿತಾಮಹ ಎಂದು ಯಾರನ್ನು ಕರೆಯುತ್ತಾರೆ?
24. ಮಾನವರು ಪೂರ್ವಾಗ್ರಹಕ್ಕೆ ಒಳಗಾಗುವದರಿಂದ ಉಂಟಾಗುವ ಪರಿಣಾಮಗಳೇನು?

**ಪ್ರಶ್ನೆ 3] ಈ ಕೆಳಗಿನ ಪ್ರಶ್ನೆಗಳಿಗೆ ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.** **15 x 2 = 30**

25. “ಸಮುದ್ರಯಾನಕ್ಕೆ ವೈಜ್ಞಾನಿಕ ಬೆಳವಣಿಗೆಯು ಕಾರಣ” ಈ ಹೇಳಿಕೆಯನ್ನು ಸಮರ್ಥಿಸಿ.
26. ಶ್ರೀರಂಗಪಟ್ಟಣ ಒಪ್ಪಂದದ ಷರತ್ತುಗಳಾವುವು? ತಿಳಿಸಿ.
27. ಸತ್ಯಶೋಧಕ ಸಮಾಜವು ಪ್ರತಿಪಾದಿಸಿದ ಸುಧಾರಣೆಗಳನ್ನು ವಿವರಿಸಿ. ಅಥವಾ

    ರಾಮಕೃಷ್ಣಮಿಷನ್ ದೃಷ್ಟಿಕೋನವನ್ನು ವಿವರಿಸಿ.
28. ಚೀನಾ ಕ್ರಾಂತಿಯ ಪರಿಣಾಮಗಳೇನು? ತಿಳಿಸಿ.
29. ಬ್ರಷ್ಟಾಚಾರ ಎಂದರೇನು? ಇದನ್ನು ತಡೆಗಟ್ಟಲು ಸ್ಥಾಪಿತವಾದ ಸಂಸ್ಥೆ ಯಾವುದು?
30. ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳ ಲಕ್ಷಣಗಳಾವುವು?
31. ಮೌನ ಕಣಿವೆ ಆಂದೋಲನ ಎಂದರೇನು?
32. ಪೂರ್ವ & ಪಶ್ಚಿಮ ಘಟ್ಟಗಳ ವ್ಯತ್ಯಾಸ ತಿಳಿಸಿ.
33. ಕಪ್ಪು ಮಣ್ಣಿನ ಗುಣಲಕ್ಷಣಗಳನ್ನು ತಿಳಿಸಿ.
34. ಅರಣ್ಯದ ಪ್ರಾಮುಖ್ಯತೆಯನ್ನು ತಿಳಿಸಿರಿ.
35. ಭಾರತವು ಜಿ.ಪಿ.ಎಸ್. ಸಂಪರ್ಕದಲ್ಲಿ ಸ್ವಾವಲಂಬಿಯಾಗಲು ಹೇಗೆ ಪ್ರಯತ್ನಿಸುತ್ತದೆ?
36. ಜನಸಂಖ್ಯಾ ಬೆಳವಣಿಗೆ ನಿಯಂತ್ರಿಸಲು ನಿಮ್ಮ ಸಲಹೆಗಳೇನು?ತಿಳಿಸಿ.
37. ಹಸಿರು ಕ್ರಾಂತಿ ಎಂದರೇನು? ಭಾರತದ ಹಸಿರು ಕ್ರಾಂತಿಯ ಪಿತಾಮಹ ಯಾರು?
38. ಭೂಕುಸಿತಕ್ಕೆ ಕಾರಣಗಳೇನು?
39. ಜಾಗತೀಕರಣದಿಂದಾಗುವ ಅನುಕೂಲಗಳಾವುವು?

**ಪ್ರಶ್ನೆ 4] ಈ ಕೆಳಗಿನ ಪ್ರಶ್ನೆಗಳಿಗೆ 4 – 5 ವಾಕ್ಯಗಳಲ್ಲಿ ಉತ್ತರಿಸಿರಿ.** **6 x 1 = 18**

40. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಪ್ರೇರಕವಾದ ರಾಜಕೀಯ & ಆರ್ಥಿಕ ಅಂಶಗಳಾವುವು? ಅಥವಾ

ಭಾರತದಲ್ಲಿ ನವ ಜಾಗೃತಿಯ ಉದಯಕ್ಕೆ ಪತ್ರಿಕೆಗಳು ಹೇಗೆ ಪ್ರಮುಖ ಪಾತ್ರ ವಹಿಸಿದವು?

41. ಭಾರತದ ವಿದೇಶಾಂಗ ನೀತಿಯನ್ನು ವಿವರಿಸಿ. ಅಥವಾ

ರಷ್ಯಾ ದೇಶದೊಂದಿಗೆ ಭಾರತದ ಸಂಬಂಧವನ್ನು ವಿವರಿಸಿ.

42. ಅಸ್ಪೃಶ್ಯತಾ ನಿವಾರಣೆಯ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳಾವುವು? ಅಥವಾ

ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸಗಳಾವುವು?

43. ಭಾರತದಲ್ಲಿ ರಸ್ತೆ ಸಾರಿಗೆಯ ಪ್ರಾಮುಖ್ಯತೆಯನ್ನು ವಿವರಿಸಿ. ಅಥವಾ

ಕೈಗಾರಿಕಾ ಸ್ಥಾನೀಕರಣದ ಮೇಲೆ ಪ್ರಭಾರ ಬೀರುವ ಅಂಶಗಳು ಯಾವುವು? ತಿಳಿಸಿ.

44. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರವನ್ನು ವಿವರಿಸಿ. ಅಥವಾ

ಸಾರ್ವಜನಿಕ ಹಣಕಾಸಿನ ಮಹತ್ವವನ್ನು ವಿವರಿಸಿ.

45. ಬ್ಯಾಂಕಗಳು ನಿರ್ವಹಿಸುವ ಕಾರ್ಯಗಳಾವುವು? ಅಥವಾ

ವಿಮೆಯ ಪ್ರಾಮುಖ್ಯತೆಯನ್ನು ತಿಳಿಸಿ.

**ಪ್ರಶ್ನೆ 5] ಈ ಕೆಳಗನ ಪ್ರಶ್ನೆಗೆ 8 – 10 ವಾಕ್ಯಗಳಲ್ಲಿ ಉತ್ತರಿಸಿ.** **1 x 4 = 4**

46. ಗಾಂಧೀಜಿಯವರು ಆರಂಭಿಸಿದ ಅಸಹಕಾರ ಚಳುವಳಿಯು ಸ್ವಾತಂತ್ರ್ಯ ಚಳುವಳಿಯನ್ನು ತೀವ್ರಗೊಳಿಸಿದ ಬಗೆಯನ್ನು ವಿವರಿಸಿ.

**ಪ್ರಶ್ನೆ 6] 47. ಭಾರತದ ನಕ್ಷೆಯನ್ನು ಬರೆದು ಕೆಳಗಿನವುಗಳನ್ನು ಗುರುತಿಸಿ.** **1 + 3 = 4**

ಎ) 23 ½ $^{0}$ ಕರ್ಕಾಟಕ ಸಂಕ್ರಾಂತಿ ವೃತ್ತ. ಬಿ) ಅಂಕಲೇಶ್ವರ ಸಿ) ಹಿರಾಕುಡ್ ಯೋಜನೆ

ಶರಣಬಸಪ್ಪ ಎಲ್ ಗುಡೂರು ಸಹಿ ಸ ಪ್ರೌ ಶಾಲೆ ಗುಂಜಳ್ಳಿ : ಸಿಂಧನೂರು ಜಿ : ರಾಯಚೂರು